

ಕುಟ್ಟುಂಡೆ ಚಿಗಳಿಯನ್ನೋ ಕೊಟ್ಟು ಉಪಕರಿಸುತ್ತಿದ್ದರು. ಅಂಗಳ ಸಾರಿಸಲೆಂದೋ ನೀರು ಹೊರಲೆಂದೋ ಹೊರಗೆ ಅಡಿ ಇಡುತ್ತಿದ್ದ ಅವರು ನಮ್ಮ ಆಟ ಕಾಣುತ್ತಲೇ ಕಳೆದುಹೋದ ಕನಸು ಕಂಡವರಂತೆ ನಿಂತುಬಿಡುತ್ತಿದ್ದರು. ಮತ್ತೆ "ಏ ಎಲ್ಹೋದ್ಯೇ... ಏನ್ಮಾಡ್ತಿದೀಯೇ..." ಎನ್ನುವ ಕೂಗಿಗೆ "ಓ ಬಂದೆ... ಇದೋ ಈಗಲೇ ಬಂದೆ" ಎನ್ನುತ್ತಾ ಹೊಸಿಲನ್ನು ಜಾಗ್ರತೆಯಿಂದ ಮುಗ್ಗರಿಸದಂತೆ ಲಂಗದ ನೆರಿಗೆಗಳನ್ನು ಹಿಡಿದೆತ್ತಿ ಒಳ ಸೇರಿಕೊಳ್ಳುತ್ತಿದ್ದರು. ಅವರ ಕಣ್ಣುಗಳು ಮಾತ್ರ ನಮ್ಮ ಆಟಗಳ ಸುತ್ತ ಗ್ರಹಗಳಂತೆ ಸುತ್ತುತ್ತಿರುತ್ತಿದ್ದವು. ಈ ಎಲ್ಲ ಕೌತುಕಗಳು ನಡೆದು ವರ್ಷಗಳೇ ಉರುಳಿದ್ದರೂ ಅದೆಷ್ಟೋ ಬಾರಿ ಕಣ್ಣ ಮುಂದೆ ಮತ್ತೆ ಮತ್ತೆ ಹಾಯುತ್ತಿರುತ್ತವೆ. ಆದರೆ ಈ ಗಂಡು ಹುಡುಗರು ಮಾತ್ರ ಬ್ರೆಡ್ಡು ಜ್ಯಾಮುಗಳ ಅಸಹ್ಯ ಜೋಕ್ ಹೇಳಿಕೊಂಡು ಬಿಡುಬೀಸಾಗಿ ಬೆಳೆದುಬಿಡುತ್ತಾರೆ. ನನ್ನಕ್ಕ ದೊಡ್ಡವಳಾದಾಗ ದೊಡ್ಡಪ್ಪನ ಮಗ ಅಜ್ಜಿಯಂದಿರ ಬಳಿ ಹೋಗಿ "ನಾ ಯಾವಾಗ ದೊಡ್ಡೋನಾಗಾದು" ಅಂತ ಉತ್ತರಕ್ಕೆ ದುಂಬಾಲು ಬಿದ್ದಿದ್ದನಂತೆ.

ಮೊದಮೊದಲು ನಮ್ಮೊಳಗಿನ ಬದಲಾವಣೆಯ ಈ ವಿಷಯ ಚರ್ಚೆಗೆ ಬಂದಾಗ ನಾವು ಗೆಳತಿಯರೆಲ್ಲ ಐದೋ ಆರನೆ ತರಗತಿಯಲ್ಲಿದ್ದಿರಬೇಕು. ನಮ್ಮ ಸಪಾಟು ಎದೆಗಳ ಮೇಲೆ ಪುಟ್ಟ ಪುಟ್ಟ ಗೊಲ್ಲೊಪ್ಪಗಳೆರೆಡು ಚಿಗುರಿ ನೋಯಿಸಲು ಶುರುಮಾಡಿದ್ದವಲ್ಲ, ನಿಜಕ್ಕೂ ನಾವವತ್ತು ಹಾಗೆ ಒಬ್ಬರಲ್ಲೊಬ್ಬರು ಮುಚ್ಚಿಟ್ಟುಕೊಳ್ಳದೆ ಹೇಳಿಕೊಳ್ಳದೆ ಹೋಗಿದ್ದಿದ್ದರೆ ಏನಾಗುತ್ತಿತ್ತೋ ಏನೋ. ಬಹುಶಃ ಯಾರಲ್ಲೂ ಹೇಳಿಕೊಳ್ಳಲಾಗದೆ ಅವ್ಯಕ್ತ ಭಯದಲ್ಲಿ ಸತ್ತೇ ಹೋಗುತ್ತಿದ್ದೇವೇನೋ. ಹಾಗೆಲ್ಲ ಅಷ್ಟಕ್ಕೇ ಯಾರೂ ಸಾಯುವುದಿಲ್ಲವೆಂದು ಈಗಂತೂ ತಿಳಿಯುತ್ತದೆ. ಆಗ ನಮ್ಮ ಪಾಲಿಗೆ ಅದೊಂದು ತಲೆ ಹೋಗುವ ವಿಚಾರವೇ ಆಗಿತ್ತು.

ನಮ್ಮ ತರಗತಿಯಲ್ಲೂ ನಿಧಾನಕ್ಕೆ ಒಬ್ಬೊಬ್ಬರೇ ಕಾಣೆಯಾಗತೊಡಗಿದ್ದರು. ಒಂದಷ್ಟು ದಿನ ಕಳೆದ ಮೇಲೆ ಕಾಣೆಯಾದವರು ಮರಳುತ್ತಿದ್ದರು. ಆದರದು ಹಾಜರಾತಿಯ ದೃಷ್ಟಿಯಲ್ಲಿ. ನಮ್ಮ ಪ್ರಕಾರ ಕಾಣೆಯಾಗುವ ಮುಂಚೆ ಇದ್ದ ಅವರೇ ಬೇರೆ, ಮರಳಿ ಬಂದ ಇವರೇ ಬೇರೆ ಆಗಿರುತ್ತಿದ್ದರು. ಹೋಲಿಸಲಾಗದಷ್ಟು ಬದಲಾವಣೆ. ಹೋಗುವಾಗಿನ ಬಾಲ್ಯದ ಮುಗ್ಧತೆ ಕಳಚಿಕೊಂಡು ನಾಚಿಕೆ ಗಾಂಭೀರ್ಯ ಹೊತ್ತ ಹೊಸ ಹುಡುಗಿಯರಾಗಿರುತ್ತಿದ್ದರು. ನಿಜಕ್ಕೂ ಕಾಣೆಯಾದ ನಮ್ಮ ಹಿಂದಿನ ಗೆಳತಿಯರು ಮರಳಿ ಬಾರದಂತೆ ಕಳೆದೇ ಹೋಗಿರುತ್ತಿದ್ದರು. ಇವರು ನಮ್ಮನ್ನು ನೋಡಿ ಇರಿ ಇರಿ ನಿಮಗೂ ಇದೇ ಆಗುತ್ತದೆ ಎನ್ನುವಾಗ ಎಂತೆಂತದೋ ಭಯ ತಲ್ಲಣ ನಡುಕ... ಪರಿಣಾಮ ಯಾರಾದರೂ ಕಾಣೆಯಾದರೆ ಸಾಕು ಅವರನ್ನು ವಿರಾಮದ ವೇಳೆಯಲ್ಲಿ ಹುಡುಕಿಕೊಂಡು ಅವರ ಮನೆಯ ಸುತ್ತ ಮುತ್ತ ನಾಯಿ ಬೆಕ್ಕುಗಳಂತೆ ಸುತ್ತುತ್ತಿದ್ದೆವು. ಸರಹದ್ದಿನೊಳಗೆ ಬಿಗಿ ಪಹರೆಯಯಲ್ಲಿರುತ್ತಿದ್ದ ಅವರು ನಮಗೆ ಕಾಣುತ್ತಿರಲಿಲ್ಲ. ಇದೆಲ್ಲ ನಮ್ಮಲ್ಲಿ ದಿಗಿಲು ಹುಟ್ಟಿಸುತ್ತಿತ್ತು. ನಾವು ಅಕ್ಷರಶಃ ದಿನ ಎಣಿಸುತ್ತಿದ್ದೆವು. ದಿನೇ ದಿನೇ ಬೆಳೆದು ದೊಡ್ಡವಾಗುತ್ತಾ ಅವ್ಯಕ್ತ ನೋವಿಗೂ ಕಾರಣವಾಗುತ್ತಿದ್ದ ಗೊಲ್ಲೊಪ್ಪಗಳನ್ನು ಕದ್ದು ಮುಚ್ಚಿ ನೋಡಿಕೊಂಡು, ಮುಟ್ಟಿಕೊಂಡು ನಮ್ಮೆಲ್ಲರಿಗೂ ಎಂಥದೋ ಭೀಕರ ಕಾಯಿಲೆಯೋ ಭೂತ ಪ್ರೇತವೋ ಮೆಟ್ಟುತ್ತದೆನ್ನುವ ಕರಾಳ ನಿರೀಕ್ಷೆಯಲ್ಲಿದ್ದವು. ಈ ಮುಟ್ಟು ಗುಟ್ಟುಗಳಿಂದ ಓಡಿದಷ್ಟೂ ಅದು ನಮ್ಮನ್ನು ಅಟ್ಟಿಸಿಕೊಂಡು ಬರುತ್ತಿತ್ತು.

ಒಮ್ಮೆ ಗೆಳತಿ ಶುಭಮಂಗಳಳ ಮನೆಗೆ ಅವಳ ನೋಟ್ಸ್ ಕೇಳಲು ಹೋದೆ. ನೋಡಿದರೆ ಅವಳು ಅವಳ ಮನೆಯ ಹೊರಭಾಗದ ಕಟ್ಟೆಯ ಮೇಲೆ ಗೋಣಿಚೀಲ ಮತ್ತದರ ಮೇಲೊಂದು